**ಕ್ರಿ. ಪ್ರ. ಸಂಖ್ಯೆ: 144/2019**

ಪಿಡಬ್ಲ್ಯೂ: 6

ದಿನಾಂಕ : 17.11.2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು : 1 ನೇ ಆರೋಪಿ ಪರ ಶ್ರೀ ಎ. ಎ. ಪಿ. ವಕೀಲರಿಂದ :**

ಚಾಸಾ-1 ರವರು ಪರಿಚಯ ಇದೆ. ಕಳುವು ಆದಅಂಗಡಿಯಿಂದ ನನ್ನ ಮನೆ ಸುಮಾರು 2 ಕಿ. ಮೀ. ದೂರ ಇರುತ್ತದೆ. ಘಟನೆ ನಡೆದ ದಿವಸದಂದು ನಾನು ಮನೆಯಲ್ಲಿ ಇದ್ದೆನು. ನಾನು 3 ವರ್ಷಗಳ ಕಾಲ ಚಾಸಾ-1 ರವರ ಅಂಗಡಿಯಲ್ಲಿ ಕೆಲಸ ಮಾಡಿದ್ದು, ಈಗ ಕಳೆದ 1 ವರ್ಷದಿಂದ ಬೇರೆ ಕಡೆ ಕೆಲಸಕ್ಕೆ ಸೇಸೇರಿರುತ್ತೇನೆ. ನನಗೆ ಘಟನೆಯ ವಿಷಯವು ಚಾಸಾ-1 ರವರು ಕರೆ ಮಾಡಿದ ಹೇಳಿದ ನಂತರ ತಿಳಿದಿರುತ್ತದೆ. ನಮ್ಮ ಅಂಗಡಿಯಲ್ಲಿ ಯಾರಾದರೂ ಮೊಬೈಲ್ ಖರೀದಿಸಿದರೆ ಅವುಗಳಿಗೆ ರಶೀದಿ ಕೊಡುತ್ತೇನೆ. ಈ ಪ್ರಕರಣದಲ್ಲಿ ಕಳುವು ಮಾಡಿದ ಮೊಬೈಲಗಳ ಬಗ್ಗೆ ನಮ್ಮಲ್ಲಿ ರಶೀದಿ ಮತ್ತು ಇನ್ನಿತರ ಟ್ಯಾಕ್ಸ ಇನವೈಸಗಳು ಇರುತ್ತದೆ. ಎಲ್ಲ ಕಂಪನಿಗಳ ಒಟ್ಟು ಸುಮಾರು 32 ಮೊಬೈಲಗಳು ಕಳುವು ಆಗಿರುತ್ತದೆ. ಪೋಲೀಸ್ ಠಾಣೆಗೆ ಹೋಗಿ ನಾನು ಹೇಳಿಕೆಯನ್ನು ನೀಡಿರುತ್ತೇನೆ. ನಾನು ಒಂದು ಬಾರಿ ಮಾತ್ರ ಪ್ರಕರಣದಲ್ಲಿ ಹೇಳಿಕೆ ನೀಡಲು ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ಅದನ್ನು ಹೊರತು ಪಡಿಸಿ ಪೋಲೀಸ್ ಠಾಣೆಗೆ ಆಗಲೀ ಅಥವಾ ಬೇರೆ ಎಲ್ಲಿಗೂ ಹೋಗಿರುವುದಿಲ್ಲ. ನಾನು ಚಾಸಾ-1 ರವರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಏರಟೈಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ನಾನು ಆಧರಿಸುವಂತೆ ಯಾವುದೇ ಪ್ರಕರಣ ನಡೆದಿರುವುದಿಲ್ಲ ಎಂದರೆ ಸರಿಯಲ್ಲ ಏರಟೈಲ್ ಕಂಪನಿ ವತಿಯಿಂದ ನಾನು ಚಾಸಾ-1 ರವರೊಂದಿಗೆ ಅವರ ಅಂಗಡಿಯಲ್ಲಿ ಮಾರಾಟ ಕೆಲಸ ಮಾಡುತ್ತಿದ್ದೆನು ಎಂದರೆ ಸರಿಯಲ್ಲ ಮತ್ತು ಈ ಬಗ್ಗೆ ನಾನು ತನಿಖಾ ಸಮಯದಲ್ಲಿ ಪೋಲೀಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : 2 ನೇ ಆರೋಪಿ ಪರ ವಕೀಲರಿಂದ :**

2 ನೇ ಆರೋಪಿತ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು, ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿಸಲಾಯಿತು.

**ಮರು ವಿಚಾರಣೆ: ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಸಹಿ/-

ಜೆಎಂಎಫ್‌ಸಿ, ಬ್ಯಾಡಗಿ.